# ಆನ್‌ಲೈನ್ ಕ್ಲಬ್ ಸೆಷನ್‌ಗಳ ಬಗ್ಗೆ ಮಾರ್ಗದರ್ಶನ

ಒಂದು ಆನ್‌ಲೈನ್ ಸೆಷನ್ ನಿಯಮಿತವಾಗಿ ಆಯ್ಕೆ ಮಾಡಿದ ಸಮಯದಲ್ಲಿ ಮತ್ತು ವೀಡಿಯೊ ಕಾನ್ಫರೆನ್ಸಿಂಗ್ ಅಥವಾ ಲೈವ್-ಸ್ಟ್ರೀಮಿಂಗ್ ಟೂಲ್‌ಗಳ ಸಹಾಯದಿಂದ ನಡೆಯುತ್ತದೆ. ಆನ್‌ಲೈನ್ ಸೆಷನ್‌ಗಳನ್ನು ನಡೆಸುವುದು ನೀವು ಮತ್ತೆ ವೈಯಕ್ತಿಕವಾಗಿ ಭೇಟಿಯಾಗುವವರೆಗೆ ನಿಮ್ಮ Code Club ಅಥವಾ CoderDojo ಒಟ್ಟಿಗೆ ಕಲಿಯುವಂತೆ ಮಾಡಲು ನಿಮಗೆ ಒಳ್ಳೆಯ ಮಾರ್ಗವಾಗಿದೆ.

ನಾವು ಈ ಮಾರ್ಗದರ್ಶಿಯನ್ನು ಸಮುದಾಯ ಸದಸ್ಯರ ಅನುಭವಗಳು ಮತ್ತು ಪ್ರತಿಕ್ರಿಯೆಯ ಆಧಾರದ ಮೇಲೆ ಅಭಿವೃದ್ಧಿಪಡಿಸಿದ್ದೇವೆ, ಮತ್ತು ಅಗತ್ಯಕ್ಕೆ ತಕ್ಕಂತೆ ನಾವು ಅದನ್ನು ನವೀಕರಿಸುವುದನ್ನು ಮುಂದುವರಿಸುತ್ತೇವೆ.

ನಿಮ್ಮ ಕ್ಲಬ್ ನಲ್ಲಿ ಮೂವರು ಕಲಿಯುವವರಲಿ ಅಥವಾ ಮೂವತ್ತಿರಲಿ,  ನಿಮ್ಮ ಸಮುದಾಯವನ್ನು ನೀವು ಚೆನ್ನಾಗಿ ತಿಳಿದುಕೊಂಡಿದ್ದೀರಿ. ಪ್ರತಿಯೊಂದು ಕ್ಲಬ್ ಅನುಭವವು ಅನನ್ಯವಾಗಿದೆ, ಆದ್ದರಿಂದ ಈ ಮಾರ್ಗದರ್ಶಿಯನ್ನು ನಿಮ್ಮ ಕ್ಲಬ್‌ಗೆ ಸರಿಹೊಂದುವಂತೆ ಅಳವಡಿಸಿಕೊಳ್ಳುವಂತೆ ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

## ಆನ್‌ಲೈನ್ ಸೆಷನ್‌ಗಳನ್ನು ಹೋಸ್ಟ್ ಮಾಡುವ ಐದು ಅಂಶಗಳು:


1. ಸುರಕ್ಷೆ
2. ಸರಿಯಾದ ಆನ್‌ಲೈನ್ ಟೂಲ್ ಅನ್ನು ಹೇಗೆ ಆಯ್ಕೆ ಮಾಡುವುದು
3. ಡೇಟಾ ರಕ್ಷಣೆ ಮತ್ತು ಭದ್ರತೆ
4. ಯುವಜನರು, ಪೋಷಕರು ಮತ್ತು ಸ್ವಯಂಸೇವಕರೊಂದಿಗೆ ಸಂವಹನ
5. ನಿಮ್ಮ ಸೆಷನ್ ಅನ್ನು ವಿನ್ಯಾಸಗೊಳಿಸುವುದು


## 1. ಸುರಕ್ಷೆ

Raspberry Pi ಫೌಂಡೇಶನ್ ಬೆಂಬಲಿಸುವ ಎಲ್ಲಾ ಚಟುವಟಿಕೆಗಳಲ್ಲಿ, ನಾವು ಸುರಕ್ಷತೆಗೆ ದೃಢವಾದ ಬದ್ಧತೆ ಹೊಂದಿದ್ದೇವೆ. ಯಾವುದೇ ಮಗು, ಯುವ ವ್ಯಕ್ತಿ ಅಥವಾ ದುರ್ಬಲ ವಯಸ್ಕರು ಎಂದಿಗೂ ಯಾವುದೇ ರೀತಿಯ ದೌರ್ಜನ್ಯವನ್ನು ಅನುಭವಿಸಬಾರದು ಎಂದು ನಾವು ನಂಬುತ್ತೇವೆ. ನಾವು ಎಲ್ಲಾ ಮಕ್ಕಳು, ಯುವಜನರು ಮತ್ತು ದುರ್ಬಲ ವಯಸ್ಕರ ಕಲ್ಯಾಣವನ್ನು ಉತ್ತೇಜಿಸುವ ಮತ್ತು ಅವರನ್ನು ಸುರಕ್ಷಿತವಾಗಿಡುವ ಜವಾಬ್ದಾರಿ ಹೊಂದಿದ್ದೇವೆ.

Raspberry Pi ಫೌಂಡೇಶನ್‌ನ <> ನಡವಳಿಕೆಯ ಸುರಕ್ಷತೆಯ ಕೋಡ್ ಆನ್‌ಲೈನ್ ಚಟುವಟಿಕೆಗಳು ಮತ್ತು ಮುಖಾಮುಖಿ ಭೇಟಿಗಳಿಗೂ ಅನ್ವಯಿಸುತ್ತದೆ. ಒಂದೇ ವ್ಯತ್ಯಾಸವು ವಯಸ್ಕರು ಮತ್ತು ಯುವಜನರ ನಡುವಿನ ಅನುಪಾತಕ್ಕೆ ಸಂಬಂಧಿಸಿದೆ: ಆನ್‌ಲೈನ್ ಚಟುವಟಿಕೆಗಳಿಗೆ, ಯಾವಾಗಲೂ ಕನಿಷ್ಠ ಇಬ್ಬರು ವಯಸ್ಕರಾದರೂ ಹಾಜರಿರಬೇಕು. ಆ ವಯಸ್ಕರಲ್ಲಿ ಕನಿಷ್ಠ ಒಬ್ಬರು ನೋಂದಾಯಿತ **Code Club** ಅಥವಾ **CoderDojo** ಸ್ವಯಂಸೇವಕರಾಗಿರಬೇಕು ಮತ್ತು ನವೀಕೃತ ಹಿನ್ನೆಲೆ ಪರಿಶೀಲನೆಯನ್ನು ಹೊಂದಿರಬೇಕು.

ಇತರ ವಯಸ್ಕರು, ಅಂದರೆ ಸ್ವಯಂಸೇವಕರು ಮತ್ತು ಪೋಷಕರಿಬ್ಬರೂ ನೀವು ಯಾವಾಗಲೂ ಅವರನ್ನು ಮೇಲ್ವಿಚಾರಣೆ ಮಾಡುತ್ತಿದ್ದಲ್ಲಿ ಮತ್ತು ಯುವಜನರ ವೈಯಕ್ತಿಕ ಮಾಹಿತಿಗೆ ಅವರ ಪ್ರವೇಶವನ್ನು ಮಿತಿಗೊಳಿಸಿದ್ದಲ್ಲಿ ಆನ್‌ಲೈನ್ ಸೆಷನ್‌ಗಳಲ್ಲಿ ಭಾಗವಹಿಸಬಹುದು. ಯಾವುದೇ ಪರಿಸ್ಥಿತಿಯಲ್ಲಿಯೂ ಯಾರೂ ಯುವಕರೊಂದಿಗೆ ಪ್ರತ್ಯೇಕವಾಗಿ ಸೆಷನ್‌ಗಳನ್ನು ನಡೆಸಕೂಡದು.

ನೀವು ಈ ಕೆಳಗಿನವುಗಳನ್ನು ಸಹ ಖಚಿತಪಡಿಸಿಕೊಳ್ಳಬೇಕು:

- ✓ ಯುವ ಜನರು ನಿಮ್ಮ ಆನ್‌ಲೈನ್ ಸೆಷನ್‌ನಲ್ಲಿ ಭಾಗವಹಿಸಲು ತಮ್ಮ ಪೋಷಕರ ಒಪ್ಪಿಗೆ ಪಡೆದಿರಬೇಕು.
- ✓ ಆನ್‌ಲೈನ್ ಸೆಷನ್ ಸಮಯದಲ್ಲಿ ಪೋಷಕರು ಅಥವಾ ಇತರ ವಯಸ್ಕರು ಮನೆಯಲ್ಲಿ ಹಾಜರಿರಬೇಕು. ಅವರು ಅದೇ ಕೋಣೆಯಲ್ಲಿ ಇರುವ ಅವಶ್ಯಕತೆಯಿಲ್ಲದಿದ್ದರೂ, ಸೆಷನ್ ನಡೆಯುತ್ತಿದೆ ಎಂದು ಅವರಿಗೆ ತಿಳಿದಿರಬೇಕು.
- ✓ ಮಕ್ಕಳು ಮನೆಯ ತೆರೆದ ಪ್ರದೇಶದಲ್ಲಿ ಅಥವಾ ಬಾಗಿಲು ತೆರೆದಿರುವ ಕೋಣೆಯಲ್ಲಿ ಕುಳಿತುಕೊಂಡು ಆನ್‌ಲೈನ್ ಸೆಷನ್‌ನಲ್ಲಿ ಭಾಗವಹಿಸಬೇಕೆಂದು ಪೋಷಕರಿಗೆ ಸಲಹೆ ನೀಡಿ.
- ✓ ಪೋಷಕರಿಗೆ ಯಾವುದೇ ಕಳವಳಗಳನ್ನು ಎಲ್ಲಿ ವರದಿ ಮಾಡಬೇಕೆಂದು ತಿಳಿದಿರುವಂತೆ Raspberry Pi ಫೌಂಡೇಶನ್‌ನ ಲಿಂಕ್ ಅನ್ನು ಒದಗಿಸಿ.
- ✓ ಯುವಜನರೊಂದಿಗಿನ ಎಲ್ಲಾ ಸಂವಹನವು ಮುಕ್ತವಾಗಿರಬೇಕು, ಮತ್ತು ನಿಮ್ಮ ಮತ್ತು ನಿಮ್ಮ ಕಲಿಯುವವರ ನಡುವೆ ಅಥವಾ ಕಲಿಯುವವರ ನಡುವೆ ಖಾಸಗಿ ಸಂದೇಶವನ್ನು ಅನುಮತಿಸುವ ಆನ್‌ಲೈನ್ ಸಾಧನಗಳ ಬಳಕೆಯನ್ನು ನೀವು ತಪ್ಪಿಸಬೇಕು. ಯಾರಾದರೂ ಒಬ್ಬ ಕಲಿಯುವವರು ನಿಮಗೆ ಖಾಸಗಿ ಸಂದೇಶವನ್ನು ಕಳುಹಿಸಿದರೆ, ಸಂಭಾಷಣೆಯನ್ನು ಮತ್ತೆ ಮುಕ್ತವಾಗಿಸಲು ಯಾವಾಗಲೂ ಸಾರ್ವಜನಿಕ ಚಾಟ್‌ನಲ್ಲೇ ಉತ್ತರಿಸಿ.
- ✓ ಸೆಷನ್ ನಡೆಯುವಾಗ ವೆಬ್‌ಕ್ಯಾಮ್‌ಗಳನ್ನು ಬಳಸಬಹುದಾದರೂ ಮನೆಯಲ್ಲಿ ಪ್ರತಿಯೊಬ್ಬರಿಗೂ ಸೆಷನ್‌ನ ಸ್ಕ್ರೀನ್‌ಶಾಟ್‌ಗಳನ್ನು ರೆಕಾರ್ಡ್ ಮಾಡಲು ಅಥವಾ ತೆಗೆದುಕೊಳ್ಳಲು ಅವಕಾಶವಿಲ್ಲವೆಂದು ತಿಳಿದಿರಲಿ.
- ✓ ನೀವು ಯುವಕರೊಂದಿಗೆ ನಿಮ್ಮ ಸ್ವಂತ ಬೋಧನಾ ವೀಡಿಯೊಗಳು/ಫೋಟೋಗಳನ್ನು ಹಂಚಿಕೊಂಡರೆ, ನಿಮ್ಮ ಹಿನ್ನೆಲೆ ಸ್ಥಳವು ಮಕ್ಕಳ ಸ್ನೇಹಿಯಾಗಿದೆ ಮತ್ತು ಸೂಕ್ತವಲ್ಲದ್ದೇನೂ ಕಾಣುತ್ತಿಲ್ಲವೆಂದು ಖಚಿತಪಡಿಸಿಕೊಳ್ಳಿ. ನೀವು ಸರಿಯಾದ ವೀಡಿಯೊ/ಫೋಟೋ ಫೈಲ್ ಅನ್ನು ಹಂಚಿಕೊಳ್ಳುತ್ತಿದ್ದೀರಿ ಮತ್ತು ನಿಮ್ಮ ಮನೆಯ ವಿಳಾಸವನ್ನು ಗುರುತಿಸಬಹುದಾದ ಮಾಹಿತಿಯೂ ಸೇರಿದಂತೆ ಅದರಲ್ಲಿ ಯಾವುದೇ ವೈಯಕ್ತಿಕ ವಿವರಗಳು ಕಾಣುತ್ತಿಲ್ಲವೆಂದು ಮೂರು ಬಾರಿ ಪರಿಶೀಲಿಸುವುದನ್ನು ಖಚಿತಪಡಿಸಿಕೊಳ್ಳಿ.
- ✓ ಯುವಜನರು ತಮ್ಮ ಪ್ರಾಜೆಕ್ಟ್‌ಗಳನ್ನು ಲಿಂಕ್‌ಗಳು ಅಥವಾ ವೀಡಿಯೊಗಳು/ಫೋಟೋಗಳಾಗಿ ನಿಮಗೆ ಕಳುಹಿಸಬಹುದು ಎಂದು ಪೋಷಕರಿಗೆ ತಿಳಿಸಿರಿ, ಮತ್ತು ನಿಮ್ಮೊಂದಿಗೆ ಯಾವುದೇ ವಿಷಯವನ್ನು ಹಂಚಿಕೊಳ್ಳುವ ಮೊದಲು ಯುವಕರು ತಮ್ಮ ಪೋಷಕರ ಅನುಮತಿ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಿ.
- ✓ ಕಲಿಯುವವರೊಂದಿಗೆ ಯಾವುದೇ ಸಂವಹನ ಸಾಧನದ ಮೂಲಕ ಯಾವುದೇ ವೈಯಕ್ತಿಕ ವಿವರಗಳನ್ನು ಹಂಚಿಕೊಳ್ಳಬೇಡಿ.

ದಯವಿಟ್ಟು ನಮ್ಮ ಆನ್‌ಲೈನ್ ಸೆಷನ್‌ಗಳ ಅತ್ಯುತ್ತಮ ಪದ್ಧತಿ'ಯ ರೆಕಾರ್ಡಿಂಗ್ ಅನ್ನು ವೀಕ್ಷಿಸಿ. ನೀವು ನಮ್ಮ ಎಂದಿನ ಲೈವ್ ಆನ್‌ಲೈನ್ ವರ್ಕ್‌ಶಾಪ್‌ಗಳಿಗೂ ಸಹ ಹಾಜರಾಗಬಹುದು.

## 2. ಸರಿಯಾದ ಆನ್‌ಲೈನ್ ಟೂಲ್ ಅನ್ನು ಹೇಗೆ ಆಯ್ಕೆ ಮಾಡುವುದು

ಆನ್‌ಲೈನ್ ಕ್ಲಬ್ ಸೆಷನ್‌ಗಳನ್ನು ಹೋಸ್ಟ್ ಮಾಡಲು ನೀವು ಸಾಕಷ್ಟು ವಿಭಿನ್ನ ಆನ್‌ಲೈನ್ ಟೂಲ್‌ಗಳನ್ನು ಬಳಸಬಹುದಾಗಿದ್ದು, ಮತ್ತು ಅವುಗಳ ಕಾರ್ಯನಿರ್ವಹಣೆ, ವೆಚ್ಚ ಮತ್ತು ಬಳಕೆಯಲ್ಲಿ ವ್ಯತ್ಯಾಸವಿರುತ್ತದೆ. ನಿಮ್ಮ ಕಲಿಯುವವರು 13 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೆ, ಬಹುತೇಕ ಎಲ್ಲಾ ಆನ್‌ಲೈನ್ ಟೂಲ್‌ಗಳಲ್ಲಿ ಅವರ ಪೋಷಕರು ಅವರ ಪರವಾಗಿ ಸೈನ್ ಇನ್ ಮಾಡಲು ಅಥವಾ ಅವರ ಖಾತೆಗಳಿಗೆ ಅಧಿಕಾರ ನೀಡಬೇಕಾಗುತ್ತದೆ.

ಈ ಕೆಳಗಿನ ಭದ್ರತಾ ಕಾರ್ಯಚಟುವಟಿಕೆಗಳನ್ನು ಅನುಮತಿಸುವ ಆನ್‌ಲೈನ್ ಸಾಧನಗಳನ್ನು ಮಾತ್ರ ಬಳಸಿ:

- ಪ್ರತಿ ಸೆಷನ್‌ಗೆ ಹೊಸ ಐಡಿಗಳನ್ನು ರಚಿಸುವುದರೊಂದಿಗೆ ಮುಚ್ಚಿದ ಅಥವಾ ಖಾಸಗಿ ಸಮೂಹಗಳ ರಚನೆ.
- ಅತಿಥಿಗಳ ಪ್ರವೇಶವನ್ನು ನಿಯಂತ್ರಿಸಲು 'ವೇಟಿಂಗ್ ರೂಮ್' ವೈಶಿಷ್ಟ್ಯ. ನಿಮ್ಮ ವೈಯಕ್ತಿಕ ಸೆಷನ್ ಐಡಿಯನ್ನು ಹಂಚಿಕೊಳ್ಳಬೇಡಿ, ಮತ್ತು ನಿಮ್ಮ ಕ್ಲಬ್‌ನ ಭಾಗವಾಗಿರುವ ಜನರು ಮಾತ್ರ ಸೇರಲು ಅನುಮತಿಸಿ.
- ಹೋಸ್ಟ್ ಮಾತ್ರ ಜನರನ್ನು ಮ್ಯೂಟ್ ಮಾಡುವ ಮತ್ತು ತೆಗೆದುಹಾಕಲು ಅರ್ಹರಾಗಿರುತ್ತಾರೆ.

ನೀವು ಬಳಸಲು ಆಯ್ಕೆಮಾಡಬಹುದಾದ ಕೆಲವು ಆನ್‌ಲೈನ್ ಪರಿಕರಗಳು ಹೀಗಿವೆ:

- ಬಿಗ್‌ಬ್ಲೂಬಟನ್, ಸಿಸ್ಕೋ ವೆಬ್‌ಎಕ್ಸ್, ಗೂಗಲ್ ಮೀಟ್ ಮತ್ತು ಜೂಮ್‌ನಂತಹ ಆನ್‌ಲೈನ್ ವೀಡಿಯೊ ಕಾನ್ಫರೆನ್ಸಿಂಗ್ ಸಾಧನಗಳು. ಅವುಗಳವೈಶಿಷ್ಟ್ಯಗಳ ಹೋಲಿಕೆಗಾಗಿ ಈ ಕೋಷ್ಟಕವನ್ನು ನೋಡಿ**.**
- ಯೂಟ್ಯೂಬ್ ಲೈವ್‌ನಂತಹ ಸ್ಟ್ರೀಮಿಂಗ್ ವೀಡಿಯೊ ಸೇವೆಗಳು.
- ಮೈಕ್ರೋಸಾಫ್ಟ್ ಟೀಮ್ಸ್ ಮತ್ತು ಗೂಗಲ್ ಕ್ಲಾಸ್‌ರೂಮ್‌ನಂತಹ ಕ್ಲೌಡ್ ಕ್ಲಾಸ್ ರೂಮ್ ಪರಿಹಾರಗಳು.
- ಆಫೀಸ್ 365 ಮತ್ತು ಗೂಗಲ್ ಡಾಕ್ಸ್‌ನಂತಹ ಸಹಯೋಗೀ ಆಫೀಸ್ ಸೂಟ್ಸ್.
- ಮೌನ ಮುರಿಯುವ ಉಪಕರಣಗಳಾದ ಕಹೂಟ್! ಮತ್ತು ಪ್ಯಾಡ್ಲೆಟ್.
- ಫ್ಲಿಪ್‌ಗ್ರಿಡ್ ಮತ್ತು ಸ್ಕ್ರ್ಯಾಚ್ ಸ್ಟುಡಿಯೋಗಳಂತಹ ಪ್ರದರ್ಶನ ಸಾಧನಗಳು.

ಸಮುದಾಯವು ವಿವಿಧ ಉಪಕರಣಗಳನ್ನು ಪ್ರಯತ್ನಿಸಿದೆ. ಅದು ಅದನ್ನು ಉಪಯುಕ್ತವೆಂದು ಕಂಡುಕೊಂಡಿದೆ:

- ಶಿಕ್ಷಣಕ್ಕಾಗಿ ಗೂಗಲ್ ವರ್ಕ್‌ಸ್ಪೇಸ್**,** ಇದು ಇವುಗಳನ್ನು ಒಳಗೊಂಡಿರುತ್ತದೆ ಗೂಗಲ್ ಮೀಟ್  ಮತ್ತು ಗೂಗಲ್ ಕ್ಲಾಸ್‌ರೂಮ್, ಇದು ಶಾಲೆಗಳು ಮತ್ತು ಡೊಜೊಗಳಿಗೆ (ಅವರ coderdojo.com ಇಮೇಲ್ ವಿಳಾಸವನ್ನು ಬಳಸಿಕೊಂಡು) ಉಚಿತವಾಗಿದೆ.
- ಝೂಮ್ ತನ್ನ ಸಾಧನದ ಉಚಿತ ಮೂಲ ಆವೃತ್ತಿಯಲ್ಲಿ ಶಾಲೆಗಳು ಮತ್ತು ಡೊಜೋಗಳಿಗೆ 40 ನಿಮಿಷಗಳ ನಿರ್ಬಂಧವನ್ನು ತಾತ್ಕಾಲಿಕವಾಗಿ ತೆಗೆದುಹಾಕಿದೆ (ಅವರ coderdojo.com ಇಮೇಲ್ ವಿಳಾಸವನ್ನು ಬಳಸಬಹುದು).
- ಮೈಕ್ರೋಸಾಫ್ಟ್ ಟೀಮ್ಸ್ ಅಥವಾ ಗೂಗಲ್ ಕ್ಲಾಸ್‌ರೂಮ್ ಅನ್ನು ಬಳಸಿಕೊಂಡು, ನೀವು ದೂರಸ್ಥ ಚಟುವಟಿಕೆಗಳನ್ನು ಆನ್‌ಲೈನ್ ಸೆಷನ್‌ಗಳೊಂದಿಗೆ ಸುಲಭವಾಗಿ ಸಂಯೋಜಿಸಬಹುದು, ಏಕೆಂದರೆ ಈ ಪ್ರತಿಯೊಂದು ಸಾಧನವು ನಿಮಗೆ ಸಾಮಗ್ರಿಗಳು ಮತ್ತು ಪ್ರತಿಕ್ರಿಯೆಯನ್ನು ಕಳುಹಿಸಲು, ಪ್ರಶ್ನೆಗಳನ್ನು ಸ್ವೀಕರಿಸಲು ಮತ್ತು ಲೈವ್ ಸೆಷನ್‌ಗಳನ್ನು ಹೋಸ್ಟ್ ಮಾಡಲು ಅನುಮತಿಸುತ್ತದೆ.

ನೀವು ಆನ್‌ಲೈನ್ ಸಾಧನವನ್ನು ಆಯ್ಕೆ ಮಾಡಿದಾಗ, ಈ ಕೆಳಗಿನವುಗಳ ಬಗ್ಗೆ ಆಲೋಚಿಸಿ:

- ✓ ಕಲಿಯುವವರು ಇತರ ಚಟುವಟಿಕೆಗಳಿಗೆ ಈಗಾಗಲೇ ಒಂದು ನಿರ್ದಿಷ್ಟ ಆನ್‌ಲೈನ್ ಸಾಧನವನ್ನು ಬಳಸುತ್ತಿದ್ದಾರೆಯೇ**?** ನೀವು ಅವರಿಗೆ ಪರಿಚಿತವಾಗಿರುವ ಸಾಧನವನ್ನು ಬಳಸಿಕೊಂಡು ಹೋಸ್ಟ್ ಮಾಡಿದರೆ ನಿಮ್ಮ ಸೆಷನ್‌ಗೆ ಸೇರಲು ಅವರಿಗೆ ಸುಲಭವಾಗುತ್ತದೆ.
- ✓ ಸಾಧನವು ವಯಸ್ಕರು ಮತ್ತು ಯುವಜನರ ನಡುವೆ**,** ಅಥವಾ ಯುವಜನರ ನಡುವೆ ಖಾಸಗಿ ಸಂವಹನವನ್ನು ಅನುಮತಿಸುತ್ತದೆಯೇ**?**ಹಾಗಿದ್ದಲ್ಲಿ ಇದು ಸುರಕ್ಷತಾ ಅಪಾಯವನ್ನು ಒಡ್ಡುತ್ತದೆ, ಆದ್ದರಿಂದ ನಿಮ್ಮ ಸೆಷನ್‌ಗಳಲ್ಲಿ ಈ ಕಾರ್ಯಚಟುವಟಿಕೆಗಳನ್ನು ನಿಷ್ಕ್ರಿಯಗೊಳಿಸುವುದನ್ನು ಖಚಿತಪಡಿಸಿಕೊಳ್ಳಿ ಅಥವಾ ಇದಕ್ಕೆ ಅನುಮತಿಸುವ ಸಾಧನಗಳನ್ನು ಬಳಸುವುದನ್ನು ತಪ್ಪಿಸಿ.
- ✓ ಈ ಸಾಧನದಲ್ಲಿ ಯುವಜನರು ಆನ್‌ಲೈನ್ ಖಾತೆಯನ್ನು ಹೊಂದುವ ಅಗತ್ಯವಿದೆಯೇ**?** ಖಾತೆಯ ಅಗತ್ಯವಿರುವ ಹೆಚ್ಚಿನ ಸಹಯೋಗೀ ಸಾಧನಗಳಿಗೆ, ಖಾತೆದಾರರು ಕನಿಷ್ಠ 13 ವರ್ಷ ವಯಸ್ಸಿನವರಾಗಿರಬೇಕು. ನಿಮ್ಮ ಗುಂಪಿನಲ್ಲಿರುವ ಯುವಜನರು ನೀವು ಬಳಸುತ್ತಿರುವ ಸಾಧನದಲ್ಲಿರುವ ವಯಸ್ಸಿನ ಮಿತಿಗಿಂತ ಕಡಿಮೆ ವಯಸ್ಸಿನವರಾಗಿದ್ದರೆ, ಅವರ ಪೋಷಕರು ಅಥವಾ ಆರೈಕೆದಾರರು ಅಗತ್ಯವಿರುವ ಖಾತೆಗಳನ್ನು ಹೊಂದಿಸಬೇಕು ಮತ್ತು ಸೆಷನ್‌ನುದ್ದಕ್ಕೂ ಹತ್ತಿರದಲ್ಲಿಯೇ ಇರಬೇಕು.
- ✓ ಸಾಧನವನ್ನು ಕಲಿಯುವವರ ಕಂಪ್ಯೂಟರುಗಳಲ್ಲಿ ಸ್ಥಾಪಿಸುವ ಅಗತ್ಯವಿದೆಯೇ**?** ಇದು ತಮ್ಮ ಕಂಪ್ಯೂಟರುಗಳಿಗೆ ಆಡಳಿತಾತ್ಮಕ ಹಕ್ಕುಗಳಿಲ್ಲದ ಕಲಿಯುವವರಿಗೆ ಒಂದು ಸಮಸ್ಯೆಯಾಗಿರಬಹುದು.
- ✓ ಸಾಧನವು ಅನೇಕ ಆಪರೇಟಿಂಗ್ ಸಿಸ್ಟಮ್‌ಗಳು ಮತ್ತು ವೆಬ್ ಬ್ರೌಸರ್‌ಗಳಲ್ಲಿ ಕೆಲಸ ಮಾಡುತ್ತದೆಯೇ**,** ಮತ್ತು ಅದು ಬಳಸಲು ಮುಕ್ತವಾಗಿದೆಯೇ**?** ಸಾಧನವು ಯಾವುದೇ ವೆಚ್ಚವಿಲ್ಲದೇ ಎಲ್ಲಾ ಭಾಗಿಗಳಿಗೂ ಸಾರ್ವತ್ರಿಕವಾಗಿ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳಿ.

## 3. ಡೇಟಾ ರಕ್ಷಣೆ ಮತ್ತು ಭದ್ರತೆ

ನೀವು ಸಂಗ್ರಹಿಸುವ ವೈಯಕ್ತಿಕ ಡೇಟಾಗೆ ನೀವು ಜವಾಬ್ದಾರರಾಗಿರುತ್ತೀರಿ, ಆದ್ದರಿಂದ ದಯವಿಟ್ಟು ನಿಮ್ಮ ದೇಶದಲ್ಲಿ ಅನ್ವಯವಾಗುವ ಡೇಟಾ ರಕ್ಷಣೆಯ ತತ್ವಗಳನ್ನು ಅನುಸರಿಸುವುದನ್ನು ಮುಂದುವರಿಸಿ. ಜಿಡಿಪಿಆರ್ ಇಯುನಲ್ಲಿ ಅನ್ವಯಿಸುತ್ತದೆ, ಮತ್ತು ಯಾವುದೇ ಇಯು ದೇಶದಲ್ಲಿರುವ ಎಲ್ಲಾ ತಂತ್ರಜ್ಞಾನ ಪೂರೈಕೆದಾರರು ಜಿಡಿಪಿಆರ್ ತತ್ವಗಳಿಗೆ ಬದ್ಧರಾಗಿರಬೇಕು. ಆದಾಗ್ಯೂ, ಐರೋಪ್ಯ ಒಕ್ಕೂಟದ ಹೊರಗಿರುವ ಕಂಪನಿಗಳಿಗೆ, ಇದು ಯಾವಾಗಲೂ ಹಾಗೇ ಇರಬೇಕೆಂದಿಲ್ಲ. ಆದ್ದರಿಂದ, ನೀವು ಇಯುನಲ್ಲಿ ವಾಸಿಸುತ್ತಿದ್ದರೆ ಮತ್ತು ಇಯುನ ಹೊರಗಿರುವ ಕಂಪನಿ ಒದಗಿಸಿದ ಆನ್‌ಲೈನ್ ಸಾಧನವನ್ನು ಬಳಸಲು ಬಯಸಿದರೆ (ಉದಾ. ಝೂಮ್ ಯುಎಸ್-ಆಧಾರಿತ ಕಂಪನಿಯದ್ದಾಗಿದೆ), ಆಗ ಕಂಪನಿಯು ಜಿಡಿಪಿಆರ್ ತತ್ವಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಲು ನೀವು ಅವರ ಖಾಸಗಿತನದ ನೀತಿಯನ್ನು ಪರಿಶೀಲಿಸಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಿಮ್ಮ ದೇಶದ ಸಂಬಂಧಿತ ಡೇಟಾ ಸಂರಕ್ಷಣಾ ಮೇಲ್ವಿಚಾರಣಾ ಪ್ರಾಧಿಕಾರಗಳಿಗೆ ಭೇಟಿ ನೀಡಿ, ಅವರು ಡೇಟಾ ಸಂರಕ್ಷಣಾ ಅಪಾಯಗಳ ಬಗ್ಗೆ ನಿಯಮಿತವಾದ ನವೀಕರಣಗಳನ್ನು ಒದಗಿಸುತ್ತಾರೆ.

ವಿಭಿನ್ನ ಆನ್‌ಲೈನ್ ಸಾಧನಗಳ ನಡುವೆ ಆಯ್ಕೆ ಮಾಡುವಾಗ, ಸಾಧನಗಳನ್ನು ಒದಗಿಸುವ ಕಂಪನಿಗಳ ಭದ್ರತೆ ಮತ್ತು ಖಾಸಗಿತನದ ನೀತಿಗಳನ್ನು ನೀವು ಓದಿರುವುದನ್ನು ಖಚಿತಪಡಿಸಿಕೊಳ್ಳಿ. ಈ ಕೆಳಗಿನ ಸಮಸ್ಯೆಗಳನ್ನು ನಿರ್ವಹಿಸಲು ಅವರು ನಿಮಗೆ ಹೇಗೆ ಅನುಮತಿಸುತ್ತಾರೆಂದು ನೀವು ಕಂಡುಕೊಳ್ಳಬೇಕು:

✓ ವೈಯಕ್ತಿಕ ಡೇಟಾ ಬಳಕೆ ಮತ್ತು ಇಟ್ಟುಕೊಳ್ಳುವಿಕೆಯನ್ನು ಮಿತಿಗೊಳಿಸಿ: ಫೈಲ್‌ಗಳನ್ನು ಅಗತ್ಯವಿರುವಂತೆ ಮತ್ತು ಸೀಮಿತ ವೈಯಕ್ತಿಕ ಡೇಟಾದೊಂದಿಗೆ ಮಾತ್ರ ಹಂಚಿಕೊಳ್ಳಬೇಕು. ವೈಯಕ್ತಿಕ ಡೇಟಾದ ಯಾವುದೇ ಉಲ್ಲಂಘನೆಯ ಅಪಾಯವನ್ನು ಕಡಿಮೆ ಮಾಡಲು ಮತ್ತು ವ್ಯಕ್ತಿಗಳ ನಿರೀಕ್ಷೆಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ನೀವು ಸಂಗ್ರಹಿಸುವ ಯಾವುದೇ ವೈಯಕ್ತಿಕ ಡೇಟಾವನ್ನು ಅಗತ್ಯವಿರುವಷ್ಟು ಕಾಲ ಮಾತ್ರ ಇರಿಸಿಕೊಳ್ಳಿ ಮತ್ತು ಸಾಧ್ಯವಾದಷ್ಟು ಬೇಗ ಅದನ್ನು ಅಳಿಸಿ ಹಾಕಿ.

✓ ಯಾವುದೇ ವೈಯಕ್ತಿಕ ಡೇಟಾಗೆ ಪ್ರವೇಶವನ್ನು ಸೀಮಿತಗೊಳಿಸಿ: ಆನ್‌ಲೈನ್ ಸಾಧನಕ್ಕೆ ಮತ್ತು ಅದರೊಳಗಿನ ಡೇಟಾಕ್ಕೆ ಪ್ರವೇಶವನ್ನು ಅಗತ್ಯವಿದ್ದವರಿಗೆ ಮಾತ್ರ ಸೀಮಿತಗೊಳಿಸಿ.

✓ ನೀವು ವೈಯಕ್ತಿಕ ಡೇಟಾವನ್ನು ಸಂಗ್ರಹಿಸಿದರೆ, ನೀವು ಅದನ್ನು ಹೇಗೆ ಬಳಸುತ್ತೀರೆಂದು ನಿಮ್ಮ ಭಾಗಿಗಳಿಗೆ ತಿಳಿಸಿ: ಇದರ ಬಗ್ಗೆ ನೀವು ಸ್ಪಷ್ಟತೆ ಮತ್ತು ಪಾರದರ್ಶಕತೆಯನ್ನು ಹೊಂದಿರಬೇಕು.

✓ ಸಾಧನವು ಸುರಕ್ಷಿತವಾಗಿದೆಯೇ  ಖಾಸಗಿತನ ಮತ್ತುಕುಕೀ ನೀತಿಗಳನ್ನು ಪರಿಶೀಲಿಸಿ ಮತ್ತು ನೀವು ಭದ್ರತೆ ಮತ್ತು ಡೇಟಾ ಸೆಟ್ಟಿಂಗ್‌ಗಳನ್ನು ಸೂಕ್ತ ಹಂತಕ್ಕೆ ಹೊಂದಿಸಿರುವುದನ್ನು ಖಚಿತಪಡಿಸಿಕೊಳ್ಳಿ. ಸಾಧನದ ಭದ್ರತಾ ಮಟ್ಟವನ್ನು ನಿರ್ಣಯಿಸುವಾಗ, ದಯವಿಟ್ಟು ಇವುಗಳನ್ನು ಪರಿಗಣಿಸಿ:
  - ಸಾಧನಕ್ಕೆ ಬಲವಾದ ಪಾಸ್‌ವರ್ಡ್ ಅಗತ್ಯವಿದೆಯೇ?
  - ಪ್ರವೇಶದ ಅವಶ್ಯಕತೆಗಳನ್ನು ಆಧರಿಸಿ ನೀವು ಪಾತ್ರಗಳನ್ನು ಸೃಷ್ಟಿಸಬಹುದೇ?
  - ಸಾಧನವನ್ನು ಬಳಸುವ ಸಂವಹನವನ್ನು ಗೂಢಲಿಪೀಕರಿಸಲಾಗಿದೆಯೇ?

## 4. ಯುವಜನರು, ಪೋಷಕರು ಮತ್ತು ಸ್ವಯಂಸೇವಕರೊಂದಿಗೆ ಸಂವಹನ

ನಿಮ್ಮ ಸೆಷನ್ ಆನ್‌ಲೈನ್‌ನಲ್ಲಿ ನಡೆಯಲಿದೆ ಎಂದು ಪೋಷಕರು ಮತ್ತು ಸ್ವಯಂಸೇವಕರಿಗೆ ತಿಳಿಸಿ ಮತ್ತು ನಿಮ್ಮ ಘೋಷಣೆಯಲ್ಲಿ Raspberry Piಫೌಂಡೇಶನ್‌ನ ಸುರಕ್ಷತಾ ಪುಟ ದ ಲಿಂಕ್ ಸೇರಿಸಿ. ನಿಮ್ಮ ಆನ್‌ಲೈನ್ ಸೆಷನ್‌ಗೆ ಲಿಂಕ್ ಮತ್ತು ಸೇರಲು ಅಗತ್ಯವಿರುವ ಯಾವುದೇ ಸೂಚನೆಗಳನ್ನು ಹಂಚಿಕೊಳ್ಳಿ (ಇದು ನಿಮ್ಮ ಸೆಷನ್ ಅನ್ನು ನೀವು ಹೇಗೆ ವಿನ್ಯಾಸಗೊಳಿಸುತ್ತೀರಿ ಎನ್ನುವುದನ್ನು ಆಧರಿಸಿರುತ್ತದೆ). ನಿಮ್ಮ ಕಲಿಯುವವರಿಗಾಗಿ ನೀವು ಯಾವ ಚಟುವಟಿಕೆಗಳನ್ನು ಯೋಜಿಸುತ್ತಿದ್ದೀರೆಂದೂ

ಹಂಚಿಕೊಳ್ಳಿ ಮತ್ತು ಅವರಿಗೆ ಅಗತ್ಯವಿರಬಹುದಾದ ಯಾವುದೇ ಆನ್‌ಲೈನ್ ಯೋಜನೆಗಳು ಅಥವಾ ಪಿಡಿಎಫ್ ಫೈಲ್‌ಗಳಿಗೆ ಲಿಂಕ್‌ಗಳನ್ನು ಸೇರಿಸಿ.

- ಕ್ಲಬ್ ಸೆಷನ್‌ಗಳ ಹೊರಗೆ ಕ್ಲಬ್ ಸದಸ್ಯರೊಂದಿಗಿನ ನಿಮ್ಮ ಸಂವಹನಗಳು ಯಾವಾಗಲೂ ಯುವಕರ ಪೋಷಕರ ಜೊತೆಗೆ ನಡೆಯಬೇಕೇ ಹೊರತು ನೇರವಾಗಿ ಯುವಕರ ಜೊತೆಗಲ್ಲ.
- ಕ್ಲಬ್ ಸದಸ್ಯರ ಪೋಷಕರನ್ನು ನೇರವಾಗಿ ಸಂಪರ್ಕಿಸಲು ನಿಮಗೆ ಯಾವುದೇ ದಾರಿಯಿಲ್ಲದಿದ್ದರೆ, ಸಹಾಯಕ್ಕಾಗಿ ನಿಮ್ಮ ಸ್ಥಳವನ್ನು ಕೇಳಿ.
- ನಿಮ್ಮ ಆನ್‌ಲೈನ್ ಸೆಷನ್‌ಗೆ ಪ್ರವೇಶ ವಿವರಗಳನ್ನು ಸಾರ್ವಜನಿಕವಾಗಿ ಹಂಚಿಕೊಳ್ಳದಂತೆ ಜಾಗರೂಕತೆ ವಹಿಸಿ, ಇದರಿಂದ ನೀವು ಆಹ್ವಾನಿಸುತ್ತಿರುವ ಜನರು ಮಾತ್ರ ಹಾಜರಾಗಲು ಸಾಧ್ಯವಾಗುತ್ತದೆ.
- ಮಗುವಿಗೆ ತಮ್ಮ ವೈಯಕ್ತಿಕ ಕಲಿಕೆಯ ಅಗತ್ಯಗಳನ್ನು ಪೂರೈಸಲು ಹೆಚ್ಚುವರಿ ಬೆಂಬಲದ ಅಗತ್ಯವಿದ್ದರೆ ಅದನ್ನು ತಿಳಿಸಲು ಪೋಷಕರಿಗೆ ಒಂದು ಅವಕಾಶ ನೀಡಿ.

## 5. ನಿಮ್ಮ ಸೆಷನ್ ಅನ್ನು ವಿನ್ಯಾಸಗೊಳಿಸುವುದು

ನಿಮ್ಮ ಆನ್‌ಲೈನ್ ಸೆಷನ್ ಅನ್ನು ಘೋಷಿಸುವ ಮೊದಲು, ಸೆಷನ್ ರಚನೆಯನ್ನು ವಿನ್ಯಾಸಗೊಳಿಸಿ ಮತ್ತು ನಿಮ್ಮ ಸಾಮಗ್ರಿಗಳನ್ನು ತಯಾರಾಗಿಟ್ಟುಕೊಳ್ಳಿ. ನಿಮ್ಮ ಮೊದಲ ಸೆಷನ್‌ಗೆ ತಯಾರಿ ನಡೆಸುವುದು ಭವಿಷ್ಯದ ಸೆಷನ್‌ಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ, ಏಕೆಂದರೆ ಇಲ್ಲಿ ನಿಮ್ಮ ಸಂಪನ್ಮೂಲಗಳು ಮತ್ತು ಸಾಧನಗಳನ್ನು ಹೊಂದಿಸಬೇಕಾಗಿರುತ್ತದೆ. ನಿಮ್ಮ ಸೆಷನ್‌ಗಳು 60 ರಿಂದ 90 ನಿಮಿಷಗಳ ನಡುವೆ ಇರಬೇಕೆಂದು ನಾವು ಶಿಫಾರಸು ಮಾಡುತ್ತೇವೆ.

ನಿಮ್ಮ ಸೆಷನ್‌ನ ರಚನೆಯ ಬಗ್ಗೆ ಆಲೋಚಿಸಿ:

- ✓ ಭಾಗವಹಿಸುವ ಯುವಕರು ಮತ್ತು ವಯಸ್ಕರಿಗಾಗಿ ನೀವು ಯಾವ ಚಟುವಟಿಕೆಗಳನ್ನು ಯೋಜಿಸುತ್ತಿದ್ದೀರೆಂದು ಅವರು ಮುಂಚಿತವಾಗಿ ತಿಳಿದುಕೊಳ್ಳಲಿ.
- ✓ ಭಾಗವಹಿಸುತ್ತಿರುವ ಯುವಕರು ಮತ್ತು ವಯಸ್ಕರಿಗೆ ನೀತಿ ಸಂಹಿತೆ ಮತ್ತು ಯಾವುದೇ ಖಾಸಗಿ ಸಂದೇಶ ಕಳುಹಿಸದಿರುವುದು ಅಥವಾ ಸ್ಕ್ರೀನ್‌ಶಾಟ್‌ಗಳನ್ನು ತೆಗೆದುಕೊಳ್ಳದಿರುವಂಥ ಆನ್‌ಲೈನ್ ಸೆಷನ್‌ನಲ್ಲಿ ನಿರೀಕ್ಷಿಸಲಾಗುವ ವರ್ತನೆಯ ಬಗ್ಗೆ ನೆನಪಿಸಿ.
- ✓ ಸೆಷನ್ ಅನ್ನು ನಡೆಸಲು ನೀವು ಆಯ್ಕೆ ಮಾಡಿದ ಆನ್‌ಲೈನ್ ಸಾಧನವು ಯುವಜನರಿಗೆ ತಿಳಿದಿರುವುದನ್ನು ಮತ್ತು ಅದನ್ನು ಹೇಗೆ ಬಳಸಬೇಕೆಂದು ಅವರು ಅರ್ಥ ಮಾಡಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಪ್ರತಿ ಸೆಷನ್‌ನ ಆರಂಭದಲ್ಲಿ ಸ್ವಲ್ಪ ಸಮಯ ಮೀಸಲಿಡಿ.
- ✓ ಸೆಷನ್‌ನ ಪ್ರಾರಂಭದಲ್ಲಿ ಒಂದು ಮೌನ ಮುರಿಯುವ ಚಟುವಟಿಕೆಯನ್ನು ಯೋಜಿಸಿ. ಇದು ನಿಮ್ಮ ಕಲಿಯುವವರಿಗೆ ಹಾಯ್ ಎಂದು ಹೇಳಲು ಮತ್ತು ಅವರು ಮಾಡಲು ಯೋಜಿಸಿರುವುದನ್ನು ಇತರರಿಗೆ ಹೇಳುವಷ್ಟು ಸರಳವಾಗಿರಬಹುದು.
- ✓ ಕಲಿಯುವವರನ್ನು ಅವರ ವಯಸ್ಸು, ಪ್ರೋಗ್ರಾಮಿಂಗ್ ಭಾಷೆ, ಅಥವಾ ಅಗತ್ಯವಿರುವ ಬೆಂಬಲದ ಮಟ್ಟದಂತಹ ಯಾವುದೇ ಪ್ರಕಾರಗಳಿಂದ ನೀವು ವಿಭಜಿಸಲು ಬಯಸುವಿರಾ ಎಂದು ನಿರ್ಧರಿಸಿ. ಕೆಲವು ಆನ್‌ಲೈನ್ ವೀಡಿಯೊ ಕಾನ್ಫರೆನ್ಸಿಂಗ್ ಸಾಧನಗಳು ಪ್ರತ್ಯೇಕ ಕೋಣೆಗಳನ್ನು ರಚಿಸುವ ಅವಕಾಶವನ್ನು ಹೊಂದಿರುತ್ತವೆ, ಅಥವಾ ವಿಭಿನ್ನ ಗುಂಪುಗಳಿಗೆ ಅನುಕೂಲವಾಗುವಂತೆ ನೀವು ಅನೇಕ ವೀಡಿಯೊ ಸೆಷನ್‌ಗಳನ್ನು ರಚಿಸಬಹುದು. ಪೋಷಕರೊಂದಿಗೆ ಸರಿಯಾದ ಲಿಂಕ್ ಅಥವಾ ಲಿಂಕ್‌ಗಳನ್ನು ಮುಂಚಿತವಾಗಿ ಹಂಚಿಕೊಳ್ಳಿ. ಬ್ರೇಕೌಟ್ ರೂಮ್‌ಗಳೂ ಸೇರಿದಂತೆ ಪ್ರತಿ ವರ್ಚುವಲ್ ಪರಿಸರದಲ್ಲಿ ಯಾವಾಗಲೂ ಕನಿಷ್ಠ ಇಬ್ಬರು ವಯಸ್ಕ ಕ್ಲಬ್ ಲೀಡರ್‌ಗಳು ಇರಬೇಕು ಎನ್ನುವುದನ್ನು ನೆನಪಿಡಿ.
- ✓ ಕಲಿಯುವವರು ತಮ್ಮ ಯೋಜನೆಗಳನ್ನು ತೋರಿಸಲು ಸಾಧ್ಯವಾಗುವಂತೆ ಸೆಷನ್‌ನ ಕೊನೆಯಲ್ಲಿ ಒಂದು ಪ್ರದರ್ಶನವನ್ನು ಏರ್ಪಡಿಸುವುದನ್ನು ಪರಿಗಣಿಸಿ.

ಡೌನ್‌ಲೋಡ್ ಮಾಡಬಹುದಾದ ಸೆಷನ್ ಶೆಡ್ಯೂಲ್ ಟೆಂಪ್ಲೇಟ್ ಸೇರಿದಂತೆ, ನಿಮ್ಮ ಕ್ಲಬ್‌ಗಾಗಿ ನಿಮ್ಮ ಆನ್‌ಲೈನ್ ಸೆಷನ್ ಅನ್ನು ವಿನ್ಯಾಸಗೊಳಿಸುವ ಬಗ್ಗೆ ನಾವು ಹೆಚ್ಚು ವಿವರವಾದ ಮಾರ್ಗದರ್ಶನವನ್ನು ನೀಡಿದ್ದೇವೆ.